Regd. No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 30 ಸಂಚಿಕೆ 82] ಶನಿವಾರ 32—11—46 [ಬಿಡಿ ಪ್ರತಿ 3 ಪೈ

ಅವರಂಗಜೇಬನ ಅವತಾರ ಗಾಂಧೀಜಿ !

ಗಾಂಧೀಜಿಯನ್ನು ಬುದ್ಧನ ಅವತಾರವೆನ್ನುವವರು ಇದ್ದಾರೆ ಪಂಮಾತ್ಮನ ಅವತಾರವೆನ್ನುವವರೂ ಇರಬಹುದು. ಹಾಗೆಯೇ ತಂತ್ರಗಾರ ಬಸಿಯಾ ಸರ್ವಾಧಿಕಾರಿ ಮುಂತಾಗಿ ಹೆಸರಿಸಿನವರೂ ಕಡಿಮೆಯಿಲ್ಲ. ಅವರೆಲ್ಲವನ್ನೂ ಮಿಗಿಸಿದ ಒಂದು ಹೆಸರನ್ನು ಈಗಶೀಗ ದಯಪಾಲಿಸಿರುವರು.— ' ಅವರಂಗಜೇಬನ ಅವತಾರ ' ವೆಂದು, — ನಾಗಪುರದ ಡಾ|| ಎಸ್. ಬಿ. ಖಾರೆ ಪ್ರಣೆಯ ' ಮರಾಠಾ ' ಪತ್ರಿಕೆಯಿಂದ ನಾವು ಈ ಲೇಖನವೆತ್ತಿಕೊಡ-ತ್ತೇವೆ .....

ಗಾಂಧೀಜಿಯ ಕಳೆದ ಇಪ್ಪತ್ತೈದು ವರ್ಷಗಳ ಚಟುವಟಿಕೆ ನೋಡಿದರೆ, ಅವರು ಅವರಂಗಜೇಬನ ಅವತಾರವೆಂದೇ ತೋರುತ್ತಿದೆ. ಅಹಿಂಸೆಯ ಕುರಿತು ಅವರ ಹಿತವಾದ ಖಿಲಾಫತದಿಂದ ಸಮಾನತ್ವ ಮತ್ತು ಸಮಾನತ್ವದಿಂದ ಅಸಮಾನತ್ವದವರೆಗಿನ ಅವರ ಚಟುವಟಿಕೆಗಳು— ಇವು ಹಿಂದೂಗಳಿಗೆ ಅಪಾರ ಹಾನಿಯುಂಟು ಮಾಡಿವೆ. ಅವರಂಗಜೇಬನು [illegible] ಬದ್ಧದ್ವೇಷಿ ಹಾಗೆಯೇ ಗಾಂಧೀಜಿಯೂ ಮುಸಲ್ಮಾನರನ್ನು ಆ ಪ್ರೀತಿಯಿಂದ [illegible] ವಾಜಿಯನ್ನು ದಾರಿ ತಪ್ಪಿದ ದೇಶಭಕ್ತನೆಂದು ಸಂಶೋಧಿಸಬಹುದು.

ಅವರಂಗಜೇಬನು ನಿಷ್ಕರುಣಿ. ಹಾಗೆ ಗಾಂಧಿ. ತಮಗಾಗಿಯೇ ಅವರಂಗ ಪೂರ್ವ ಬಂಗಾಲಕ್ಕೆ ಹೋಗಿ ಅಲ್ಲಿಯ ಹಿಂದೂಗಳಲ್ಲಿ ಕೊಂಚವಾದರೂ ಉಳಿದಿರುವ ಆತ್ಮರಕ್ಷಣೆಯ ಅಗ್ನಿಯನ್ನು ಆರಿಸಲು ಯತ್ನಿಸುತ್ತಿದ್ದಾರೆ.

ಅವರಂಗಜೇಬನು ಇಸ್ಲಾಮಿನ ಹೆಸರಲ್ಲಿ ಹಿಂದೂ ದೇಶವನ್ನಾಳಿದನು. ಗಾಂಧೀಜಿಯವರು ಸತ್ಯ ಮತ್ತು ಅಹಿಂಸೆಯ ಹೆಸರಲ್ಲಿ ಕಾಂಗ್ರೆಸನ್ನಾಳುತ್ತಿದ್ದಾರೆ. ಅವರಂಗಜೇಬನು ಸರಳ ಹಾಗೂ ಶ್ರದ್ಧೆಯ ಜೀವನವನ್ನು ನಡೆಸಿದನು. ಹಾಗೆಯೇ ಗಾಂಧಿಜಿ. ಅವರಂಗಜೇಬನು ಟೊಪ್ಪಿ ಸುತಾಂ ಜೀವಿಸಿದನು. ಗಾಂಧಿಜಿ ಚರಕ ತಿರುಗಿಸುತ್ತಿದ್ದಾರೆ. ಅವರಂಗಜೇಬನು ಕರುಣೆಯಿಲ್ಲದೆ ತನ್ನ ಸಹೋದರರನ್ನು ಕೊಂದು ಸಿಂಹಾಸನವೇರಿದನು. ಗಾಂಧಿಜಿಯವರು ಅಹಿಂಸೆಯಿಂದಲೇ ನರಿಮಾನ್, ರೊಯ್ ಸುಭಾಷ ಮತ್ತು ಖರೆಯವರನ್ನು ದೂರವಿರಿಸಿದರು. ಅವರಂಗಜೇಬನು ಸಾಂಭಾಜಿಗೆ ಇಸ್ಲಾಮ್ ಸೇರುವಂತೆ ಹೇಳಿ ನಿರಾಕರಿಸಿದ್ದಕ್ಕೆ ಕೊಂದನು. ಗಾಂಧಿಜಿಯವರು ಖರೆಯವರಿಗೆ ಮತ್ತೊಂದು ರೀತಿಯಲ್ಲಿ ಕೊಂದರು. ಇದರ ಫಲವಾಗಿ ಖರೆಯವರು ಕಾಂಗ್ರೆಸ್ಸಿನ ಒಂದು ಸಾಮಾನ್ಯ ಅನುಯಾಯಿಯಾಗಿ ಕೂಡ ಉಳಿಯದಂತಾಯಿತು. ಅಬಗ್ಗೆ ನನಗೆ ದುಃಖವಿಲ್ಲ. ಗಾಂಧಿಜಿಯವರು ಅವರಂಗಜೇಬನ ಅವತಾರವೆನ್ನಲು ಇಷ್ಟೇ ತುಲನೆ ಸಾಕು. ಇಂಗ್ಲಿಷ ಚರಿತ್ರಕಾರರು ಅವರಂಗಜೇಬನ ವಿಷಯ ಹೀಗೆಂದಿರುವರು. ' ಸ್ವಾರ್ಥಿ ಕ್ರೂರಿ ಮತ್ತು ಒಡಕುಂಟುಮಾಡುವ ಕಲೆಯಲ್ಲಿ ನಿಸ್ಸೀಮನಾಗಿದ್ದ ಅವರಂಗಜೇಬನು ತನ್ನ ಮಹತ್ವಾಕಾಂಕ್ಷೆ ಈಡೇರಲು ಯಾವುದಕ್ಕೂ ಹೇಸಲಿಲ್ಲ. ಸ್ವಭಾವತಃ ಸನ್ಯಾಸಿ ಧೋರಣೆಯಲ್ಲಿ ವಂಚಕ ಫಕೀರನ ತೆರೆಯ ಹಿಂದೆ ಗರ್ವ ಕೃತ್ಯಗಳನ್ನು ಮರೆಸಿ ನಡೆದ ನಿಷ್ಕರುಣಿ ನಿರಂಕುಶ ಪ್ರಭು ..... ' ಈ ಮಾತುಗಳೇ ಗಾಂಧೀಜಿಗೆ ಒಪ್ಪುತ್ತಿದೆಯೋ ಇದನ್ನು ವಾಚಕರಿಗೇ ಬಿಟ್ಟುಕೊಟ್ಟಿದ್ದೇನೆ. (ಪ್ರಭಾತ)

ಕೋಮುವಾರು ಸಮಸ್ಯೆ ಪರಿಹಾರಕ್ಕೆ ಮುಸ್ಲಿಂ ಲೀಗಿನ ಅಡ್ಡಿಯೆ?

ತಾತ್ಕಾಲಿಕ ಸರ್ಕಾರದಲ್ಲಿ ಲೀಗ್ ಪದಚ್ಯುತವಾಗುವುದೇ

ಕಾಂಗ್ರೆಸ್ ನಗರ ನ 21 — ಮುಸ್ಲಿಂ ಲೀಗು ರಾಜ್ಯಾಂಗ ಘಟನಾ ಸಮಿತಿಯಲ್ಲಿ ಭಾಗವಹಿಸದಿದ್ದರೆ ತಾತ್ಕಾಲಿಕ ಸರಕಾರದಲ್ಲಿಯೂ ಲೀಗಿಗೆ ಸ್ಥಾನವಿರುವುದಿಲ್ಲ ಎಂಬುದಾಗಿ ಪಂ|| ನೆಹರು ಕಾಂಗ್ರೆಸ್ ಸಮಾವೇಶದ ಕಾರ್ಯನಿರ್ವಾಹಕ ಸಮಿತಿಯಲ್ಲಿ ತಿಳಿಸಿದರು.

o o

' ತಾತ್ಕಾಲಿಕ ಅಂತರಂಗದ ಹೊಸ್ಥಿತಿ ಲೀಗ್ ಪ್ರವೇಶವಾದ ಸಂತರ್ದ್ವಿಭಾರಿ ಕೆಟ್ಟಿತು. ವೈಸರಾಯರು ಮುಂಚಿನಂತೆ ಸಹಕರಿಸುತ್ತಿಲ್ಲ ' ಎಂಬುದಾಗಿ ಪಂ|| ನೆಹರು ತಮ್ಮ ಭಾಷಣದಲ್ಲಿ ತಿಳಿಸಿದರು.

ಇನ್ನೂರು ಮಂದಿ ಫಕಾಯಿತಿಗಳು ಮುತ್ತಿದರು

ಚಿತ್ರದುರ್ಗ ನ 22 — ಇದೇ ತಾ|| 17 ರಲ್ಲಿ ಶಸ್ತ್ರ ಸಜ್ಜಿತರಾದ 200 ಮಂದಿ ಫಕಾಯಿತರು ಜಗಳೂರು ತಾಲ್ಲೂಕಿನ ಅಯ್ಯನ ಹಳ್ಳಿಯನ್ನು ಮುತ್ತಿ, ಜಾನುವಾರುಗಳು ಇತ್ಯಾದಿಗಳನ್ನು ಸುಲಿಗೆ ಮಾಡಿ ಪರಾರಿಯಾದರೆಂದು ತಿಳಿದು ಬಂದಿದೆ.

o o

ಪ್ರಜಾಪ್ರತಿನಿಧಿ ಸಭೆ ಸದಸ್ಯರಾದ ಶ್ರೀ ಕಾಳಿಂಗಪ್ಪನವರನ್ನು ಪುತ್ರ ಸಹೋದರ ಸನೇತರಾಗಿ ಮತ್ತು 18 ಮಂದಿಯೊಡತಿ ದಸ್ತಗಿರಿ ಮಾಡಲಾಗಿದೆ.

o o

ರೂ 75ಲಕ್ಷ ನಷ್ಟ ಸಂಭವಿಸಿದೆಯೆಂತೆ ಹಗಲು ದರೋಡೆಯಂತೆ ಇದು 8 ಮಂದಿ ಗಾಯಗೊಂಡರಂತೆ !

ಅಧ್ಯಕ್ಷರ ಮೇಲೆ ಸರ್ಕಾರದ ಶಿಸ್ತು ?

ವಾಷಿಂಗ್‌ಟನ್ ನ 21 — 4 ಲಕ್ಷ ಮಂದಿ ಕಲ್ಲಿದ್ದಲು ಕೆಲಸಗಾರರ ಮುಷ್ಕರದಿಂದ ಬಹಳ ನಷ್ಟವಾಗಿರುವುದಂತೆ. ಕಲ್ಲಿದ್ದಲು ಕಾರ್ಮಿಕ ಸಂಘದ ಅಧ್ಯಕ್ಷ ಎಚ್|| ಜೆನ್ರಿಜಾರ್ಡ್‌ಲೂಯಿ ಮೇಲೆ ಸರ್ಕಾರ ಶಾಸನ ಜಾರಿ ಮಾಡುವುದಂತ !

ಶಸ್ತ್ರಾಸನ್ಯಾಸ

ನ್ಯೂಯಾರ್ಕ್ ನ 21 — ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ ರಷ್ಯಾ ಕೊಟ್ಟ ಸೂಚನೆಯಾದ ತತ್ಕ್ಷಣಗಳಲ್ಲಿದ ರಾಜ್ಯಗಳಲ್ಲಿ ಮಿತ್ರ ಸೇನೆಗಳ ಖಾಸೇಷು ಮಾಡಬೇಕೆಂಬ ವಿಷಯ ಚರ್ಚೆಗೆ ಬಂದು ಅನೇಕರು ಮಾತನಾಡಿದರು. ಈ ವಿಷಯದಲ್ಲಿ ಬ್ರಿಟಿಷ್ ಪ್ರತಿನಿಧಿ ಬೆವಿನ್ನರು ಮಾತನಾಡುತ್ತಾ ತನ್ನ ದೇಶವೇ ಶಸ್ತ್ರಾ ಸನ್ಯಾಸ ವಿಷಯದಲ್ಲಿ ಮೇಲುಪಂಗ್ತಿ ಹಾಕುತ್ತಿದೆ ಎಂದರು.

ಲೀಗಿನ ಅಡ್ಡಿಯೇ

ವಿಾರತ್ ನ 21 — ಕೋಮುವಾರ ಸಮಸ್ಯೆ ಪರಿಹಾರ ಮಾಡಲು ಕಾಂಗ್ರೆಸ್ಸಿನ ಪ್ರಯತ್ನವನ್ನು ಲೀಗು ಪದೇ ಪದೇ ಅತಂಕಪಡಿಸುತ್ತಿರುವುದಾಗಿ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯ ನಿರ್ಣಯದಲ್ಲಿ ಸೂಚಿಸಲಾಗಿದೆ.

ಭಾಷಣ

ಸರ್. ಸಿ. ವಿ. ರಾಮರು ಸೋಮವಾರದ ಸೆಂಟ್ ಫಿಲೋಮೆನಾ ಕಾಲೇಜಿನಲ್ಲಿ ಭಾಷಣ ಮಾಡುವರು.

ಕೋಮುದ್ವೇಷ ಪ್ರೇರಕರು ಸಾವಲ್ಲ

ಡಾಕ್ಕಾ ನ 22 — ಬಂಗಾಳ ಗವರ್ನರರು ಕೊಟ್ಟಿರುವ ಹೇಳಿಕೆಯಲ್ಲಿ ಕೋಮುವಾರು ಗಲಭೆಯನ್ನು ಬ್ರಿಟಿಷರು ಪ್ರೇರೇಪಿಸುತ್ತಿದ್ದಾರೆ. ಎಂಬುದು ಶುದ್ಧ ಸುಳ್ಳು ಎಂದು ತಿಳಿಸಿದ್ದಾರೆ.

ಕಣ್ಣೀರು ಜಲಿಸುವ ಮಾತು ಸ್ಮಟ್ಸ್‌ರದು

ನ್ಯೂಯಾರ್ಕ್ ನ 22 — ದಕ್ಷಿಣ ಆಫ್ರಿಕಾ ಒಳಾಡಳಿತಕ್ಕೆ ಪ್ರನೇಶಿಸುವ ಹಕ್ಕು ವಿಶ್ವಸಂಸ್ಥೆ ಹೊಂದಿರುವುದೇ ? ಭಾರತೀಯ ಸಮಸ್ಯೆ ಒಳಾಡಳಿತಕ್ಕೆ ಸೇರಿದ್ದು ! ದ. ಆಫ್ರಿಕಾಕ್ಕೆ ಕೂಲಿಗಾರರಾಗಿ ಬಂದವರು ಭಾರತದ ನಿಮ್ನ ವರ್ಗದ ಜನರು ಈಗ ಅವರ ಜೀವನ ಮಟ್ಟವು ಉತ್ತಮಗೊಂಡಿದೆ ' ಎಂದು ಫೀ|| ಮಾ|| ಜ| ಸ್ಮಟ್ಸ್ ವಿಶ್ವಸಂಸ್ಥೆಯಲ್ಲಿ ನಿನ್ನೆಯ ದಿವಸದ ಭಾಷಣದಲ್ಲಿ ತಿಳಿಸಿದರು.

ಸೊಳ್ಳೆಗಳ ವೃತ್ತಾಂತ

ಸೊಳ್ಳೆಗಳು ಮಾಮೂಲಾಗಿ ಎರಡು ಮೂರು ಮೈಲಿಗಳಷ್ಟು ತನ್ನ ನಿವಾಸ ಸ್ಥಾನದಿಂದ ಸುತ್ತಮುತ್ತ ತಿರುಗಿ ಬರುತ್ತವೆ. ಗಾಳಿಯು ಜೆನ್ನಾಗಿ ಬೀಸಿದಲ್ಲಿ ನಾಲ್ಕು ಮೈಲಿ ಕೂಡ ಹೋಗುತ್ತವೆ ಸಾಯಂಕಾಲದ ಹೊತ್ತು ವಿಹಾರಕ್ಕೆ ಹೊರಡುವ ಸೊಳ್ಳೆಗಳು ಹೆಣ್ಣು ಜಾತಿಯವು. ಪ್ರಾತಃಕಾಲ ಶಿಕಾರಿಗೆ ಹೊರಡುವವು ಗಂಡು ಸೊಳ್ಳೆಗಳು. ಮಲಯಾ ದ್ವೀಪ ಸ್ಟ್ರೀಮಂದ ಕೌಲಾಲಗಪೂರು ಮೊದಲಾದ ಸ್ಥಳಗಳಲ್ಲಿ ಯಾವ ಒಗೆಯಲ್ಲಿ ಸಾಯಂಕಾಲವಾಗುತ್ತಲೂ ಸ್ಟ್ರೀಯರ ಸಂಚಾರವೇ ಹೆಚ್ಚಾಗಿರುತ್ತದೆಯೋ, ಬೀದಿಗಳು ರೈಲ್ವೇ ಸ್ಟೇಷನ್ನು ಮಾರ್ಕೆಟ್ಟು ಮೊದಲಾದ ಸ್ಥಳಗಳಲ್ಲಿ ಸ್ತ್ರೀಯರ ತಂಡಗಳೇ ಕಾಣಿಸುತ್ತಿರುವಂತೆ ಸೊಳ್ಳೆಗಳ ಪದ್ಧತಿಯೂ ಇರುವಂತೆ ಕಾಣುತ್ತದೆ (ಓಂ)

ಪ್ರಕೃತಿ ಚಿಕಿತ್ಸೆ

.....

ವಿಷಯವನ್ನು ಕುರಿತು

ನವೆಂಬರ್ ತಾ || 27, 28, 29 ರಲ್ಲಿ ಸಂಜೆ 6 ಗಂಟೆಗೆ ಧ || ಪ್ರ || ಜನಮಮಯ್ಯ ಹೈ ಸ್ಕೂಲಿನಲ್ಲಿ, ಪುದುಕೋಟೆ ಇಂಡಿಯನ್ ಇನ್ಸ್ಟಿಟೂಟ್ ಆಫ್ ನ್ಯಾಚುರಲ್ ಥಿಯರಪ್ಯಿಕ್ಸಿನ ಡೈರೆಕ್ಟರಾದ ಡಾ || ಎಲ್. ಕಾಮೇಶ್ವರ ಶರ್ಮರು ಉಪನ್ಯಾಸ ಮಾಡುವರು. ಶ್ರೀಮತಿ ಸಿಲೆಟ್' ಪೇರವರೂ (ಫ್ರಾನ್ಸಿನವರು) ಭಾಷಣ ಮಾಡುವರು. ಸರ್ವರಿಗೂ ಸ್ವಾಗತವಿದೆ,— ಎಂದು ಉಪನ್ಯಾಸವನ್ನು ಏರ್ಪಡಿಸಿರುವ 'ಹಿಂದೂ' ಚಾತ್ರೀದಾರರಾದ ಶ್ರೀ ಗೋಪಾಲಕೃಷ್ಣ ರಾಯರು ತಿಳಿಸಿರುತ್ತಾರೆ

ಶಕ್ತಿ ಸುಧಾ

ಸೇವಿಸಿ

ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ

ನಿಸ್ಸಾರವಾದ, ನತಿಸಿರುವ ದೇಹಕ್ಕೆ ನವಚೈತನ್ಯವನ್ನು ಕೊಡುವುದರಲ್ಲಿ ಅದ್ವಿತೀಯವಾದುದು.

ವಿಳಾಸ — ಶಕ್ತಿಸುಧಾ, 1067 ಚಾಮರಾಜಪುರಂ, ಮೈಸೂರು

SHAKTI SUDHA

For Rich Blood, Strong Nerves & Exuberant Vitality

ಎಲಿಜಬೆತ್ ರಾಜಕುಮಾರಿ ಕಪ್ಪರಿ ಸವಾರಿ ಮಾಡುತ್ತಿರುವುದು

Talk-a-Tone

Premier Film Mag. of S. India
Local Agent— D. Mahaadev
c/o Opera Talkies,,Myso

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ಸೋವಂವಾರದ ಸಂಚಿಕೆ
ವಾರ್ಷಿಕಚಂದಾ
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12--0

Edited, Printed and Published by M. S Krishna Rao at the Satyavadi Press Chamaraj Agrahar Mysore.

At Opera — 5th Glorious Week

Sri Murugan

ಶ್ರೀ ಮುರುಗನ್

ಹೊನ್ನಪ್ಪ ಭಾಗವತರ್, ಕಾಳಿ ಎಕ್ ರತ್ನ, ಮಾಲತಿ, ಜೀವರತ್ನ, ಯೋಗ ಮಂಗಳಂ ಮುಂತಾದವರು

ಪಾತ್ರವಹಿಸಿರುವರು (ತಮಿಳು ಚಿತ್ರ)

At Ranjit — 2nd Houseful Week

ಸೂರಿಯಾ - ಪಹರಿ ಸನ್ಯಾಲ್ - ಷಾ ನವಾಜ್

ಪಾತ್ರವಹಿಸಿರುವ

ಮೈಕ್ಯಾಕರೂಂ

Mai Kya Karam

ಪ್ರತಿ ದಿನ 3 ಆಟಗಳು .... ಅಮೋಘ ಹಿಂದಿ ಚಿ

ನುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಟಾಂಪಿಲೆಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೫. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಪೇಟೆ, ಬೆಂಗಳೂರು.